# ಏನು ಮಾಡಿದರೇನು ಭವ ಹಿಂಗದು

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 141.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 138.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 51.
4. **Note:** Lyrics given without highlights are as per Ref. 1. The wordings in Ref. 2 same as in Ref. 1 with few differences, which are not considered here. The wordings in Ref. 3 are slightly different which are given separately in green highlights.
5. **Note:** Ankita is different in both the books. We have considered book in Ref.1 as standard and taken that Ankita for listing.
6. **Note:** Singer has followed lyrics as in Ref. 1.

ರಾಗ : ಮುಖಾರಿ ತಾಳ : ಝಂಪೆ

ಏನು ಮಾಡಿದರೇನು ಭವ ಹಿಂಗದು
ದಾನವಾಂತಕ ನಿನ್ನ ದಯವಾಗದನಕ ॥ ಪ ॥

ಅರುಣೋದಯದಲೆದ್ದು ಅತಿ ಸ್ನಾನಗಳ ಮಾಡಿ
ಬೆರಳನೆಣಿಸಿದೆ ಅದರ ನಿಜವರಿಯದೆ
ಚರಣ ಸಾಷ್ಟಾಂಗವನು ಮಾಡಿ ನಾ ದಣಿದೆನೊ
ಹರಿ ನಿನ್ನ ಕರುಣಾಕಟಾಕ್ಷವಾಗದನಕ ॥ ೧ ॥

ಶ್ರುತಿ ಶಾಸ್ತ್ರ ಪುರಾಣಗಳನೋದಿ ಬೆಂಡಾದೆ
ಅತಿ ಶೀಲಗಳನೆಲ್ಲ ಮಾಡಿ ದಣಿದೆ
ಗತಿಯ ಪಡೆವೆನೆಂದು ಕಾಯ ದಂಡಿದಿಸಿದೆನೊ
ರತಿ ಪತಿ ಪಿತ ನಿನ್ನ ದಯವಾಗದನಕ ॥ ೨ ॥

ಧ್ಯಾನವನು ಮಾಡಿದೆನು ಮೌನವನು ತಾಳಿದೆನು
ನಾನು ಪುರುಷಾರ್ಥಕೆ ಮನವನಿಕ್ಕಿ
ಅನಾಥ ಬಂಧು ಶ್ರೀ ಪುರಂದರ ವಿಠಲನ
ಧ್ಯಾನಿಸುವರೊಡಗೂಡಿ ನೆಲೆಗಾಣದನಕ || ೩ ||

**Note:** Below mentioned lyrics, given in green highlights, are as per Ref. 3 above.

ರಾಗ: ಕಾಂಬೋದಿ ತಾಳ: ಝಂಪೆ

ಏನು ಮಾಡಿದರೆನ್ನ ಭವ ಹಿಂಗದು
ದಾನವಾಂತಕ ನಿನ್ನ ದಯವಾಗದನಕ || ಪ ||

ಅರುಣೋದಯದಲೆದ್ದು ಅತಿ ಸ್ನಾನಗಳ ಮಾಡಿ
ಬೆರಳೆಣಿಸುತ ಸ್ಮರಿಸಿ ನಿಜವರಿಯದೆ
ಶರಣು ಸಾಷ್ಟಾಂಗವನು ಹಾಕಿದೆನು ಶತ-ಸಹಸ್ರ
ಹರಿ ನಿನ್ನ ಕರುಣಾಕಟಾಕ್ಷವಿರದನಕ || ೧ ||

ಶ್ರುತಿ ಶಾಸ್ತ್ರ ಪುರಾಣಗಳನೋದಿ ಬೆಂಡಾದೆ
ಅತಿ ಶೀಲಗಳನೆಲ್ಲ ಮಾಡಿ ದಣಿದೆ
ಗತಿಯ ಪಡೆಯುವೆನೆಂದು ಗಯೆ ಕಾಶಿ ಮಾಡಿದೆನು
ರತಿಪತಿಯ ಪಿತ ನಿನ್ನ ದಯವಾಗದನಕ || ೨ ||

ದಾನವನು ಮಾಡಿದೆನು ಮೌನವನು ತಾಳಿದೆನು
ಜ್ಞಾನ ಪುರುಷಾರ್ಥಕ್ಕೆ ಮಾನವೀಯದೆ
ಶ್ರೀನಾಥ ದಯಪೂರ್ಣ ಪುರಂದರ ವಿಠಲನ
ಧ್ಯಾನಿಸುವರೊಡನಾಡಿ ನೆಲೆಗೊಳ್ಳದನಕ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಿಜವಾದ ಅಂತರಂಗವನ್ನು ಅರಿಯದೆ ಮಾಡಿದ ವ್ರತ ನೇಮಗಳೆಲ್ಲ ವ್ಯರ್ಥವೆಂದು ದಾಸರ ಅಭಿಮತ.

**ದಾನವಾಂತಕ** = ದಾನವರನ್ನು ಕೊಂದವನು, ವಿಷ್ಣು

**ಶತಸಹಸ್ರ** = ಲಕ್ಷ

**ಶೀಲ** = ವ್ರತ ನೇಮಗಳು

**ಪುರುಷಾರ್ಥಕೆ** = ಜನ್ಮ ಸಾಫಲ್ಯಕೆ

**Classification:** Keerthane
**Ankita:** sri purandara vittala
**Location:** NA
**Category:** Binnaha, Samsara Chitranagalu
**Sub-Category:** bhava, daya, aruna, snana, Krishna, karune, shruthi, shastra, purana, Dhyana, mana, jnana,
**Pravachana:** NA
**Explanation:** NA